



ಟೀ ಶರ್ಟ್, ಮಿಡಿ, ಲಾಂಗ್ ಸ್ಕರ್ಟ್‌ಗಳವರೆಗೆ ಎಲ್ಲ ರೀತಿಯ ಡ್ರೆಸ್‌ಗಳಿಗೂ ಹೊಂದಿಕೆಯಾಗುವಂಥ ಸಾಮರ್ಥ್ಯ ಇರುವ ಆಭರಣ ಎಂದರೆ ಈ ಪೇಪರ್ ಆಭರಣಗಳು.

## ಜುಮುಕಿಗಳಿಗೆ ಬೇಡಿಕೆ

ಕ್ವಿಲ್ಲಿಂಗ್ ಆಭರಣಗಳಲ್ಲಿ ದೊಡ್ಡದಾದ ಜುಮುಕಿಗಳಿಗೆ ಎಲ್ಲಿಲ್ಲದ ಬೇಡಿಕೆ. ಅದು ಕಾಲೇಜು ಕನ್ಯೆಯರೇ ಇರಲಿ, ಆಫೀಸಿಗೆ ಹೋಗುವ ಮಹಿಳೆಯರೇ ಇರಲಿ. ಎಲ್ಲ ತರಹದ ಉಡುಪುಗಳಿಗೆ ಸೂಟ್ ಆಗುವ ಈ ಜುಮುಕಿಗಳಿಗೆ ಮಾರು ಹೋಗಿದ್ದಾರೆ. ಪೇಪರ್ ಜುಮುಕಿಗಳು ಮರದ ಇಲ್ಲವೇ ಟೆರಕೋಟಾ ಜುಮುಕಿಗಳಂತೆ ಕಿವಿಗೆ ಭಾರವಾಗುವುದಿಲ್ಲ. ಕಲರ್‌ಫುಲ್ ಮತ್ತು ಗ್ರ್ಯಾಂಡ್ ಲುಕ್ ನೀಡುವ ಈ ಜುಮುಕಿಗಳು ಕೇವಲ 100 ರೂಪಾಯಿಗೆ ಲಭ್ಯ. ವಿಭಿನ್ನ ಸೈಜ್‌ಗಳಲ್ಲಿ ಮತ್ತು ಆಕಾರಗಳಲ್ಲಿ ಬಹುತೇಕ ಎಲ್ಲಾ ಶೇಡ್‌ಗಳಲ್ಲೂ ದೊರೆಯುವ ಈ ಜುಮುಕಿಗಳನ್ನು ನಿಮ್ಮ ಡ್ರೆಸ್‌ಗೆ ಮ್ಯಾಚ್ ಮಾಡಿ ಧರಿಸಬಹುದು. ಕೆಂಪು, ಹಸಿರು, ಹಳದಿ, ನೀಲಿ, ಬಹುವರ್ಣಗಳಲ್ಲಿ ದೊರೆಯುವ ಈ ಜುಮುಕಿಗಳು ನೋಡಲು ಸುಂದರವಾಗಿರುವುದರಿಂದ ಎಲ್ಲ ವಯೋಮಾನದವರನ್ನೂ ತಮ್ಮತ್ತ ಸೆಳೆಯುತ್ತಿವೆ.



ಬರೀ ಜುಮುಕಿಗಳು ಮಾತ್ರವಲ್ಲ; ಪಕ್ಷಿಗಳ ಆಕಾರದ ಸ್ಟಡ್‌ಗಳು ಪುಟ್ಟ ಹುಡುಗಿಯರನ್ನು ಆಕರ್ಷಿಸುತ್ತಿವೆ. ಇನ್ನು ಪೇಪರ್ ಕ್ವಿಲ್ಲಿಂಗ್‌ನಲ್ಲಿ ತಯಾರಿಸಲಾದ ಕ್ಲಿಪ್‌ಗಳು, ಹೇರ್‌ಬ್ಯಾಂಡ್‌ಗಳು, ಪೆಂಡೆಂಟ್, ನೆಕ್ಲೆಸ್, ಬ್ರೇಸ್ಲೆಟ್ ಎಲ್ಲವೂ ದೊರೆಯುತ್ತಿವೆ. ಇವುಗಳನ್ನು ನಿಮ್ಮ ಡ್ರೆಸ್‌ಗಳಿಗೆ ಮ್ಯಾಚ್ ಮಾಡಿ ಧರಿಸಿದರೆ ಸಾಕು.

ಪೇಪರ್ ಕ್ವಿಲ್ಲಿಂಗ್ ಆಭರಣ ತಯಾರಿಯನ್ನು ಸ್ವಂತ ಉದ್ಯೋಗ ಮಾಡ ಬಯಸುವವರು ಇದರ ತರಬೇತಿ ಪಡೆದು ಮಾಡಬಹುದು. ಸಾಮಾನ್ಯವಾಗಿ ಚಿತ್ರಕಲಾ ತರಬೇತಿ ನಡೆಸುವವರು ಇದರ ತರಬೇತಿ ನೀಡಬಲ್ಲರು. ಇಲ್ಲವೇ ಇಂಟರ್‌ನೆಟ್‌ನಿಂದ ಕೂಡ ನೀವು ಇದರ ಬಗ್ಗೆ ಮಾಹಿತಿ ಪಡೆದು ಕ್ವಿಲ್ಲಿಂಗ್ ಆಭರಣಗಳನ್ನು ಮನೆಯಲ್ಲಿಯೇ ತಯಾರಿಸಿಕೊಂಡು ಧರಿಸಿ ಉಳಿದವರಿಗಿಂತ ಡಿಫರೆಂಟ್ ಆಗಿ ಕಾಣಬಹುದು. ರೆಡಿಮೇಡ್ ಪೇಪರ್ ಆಭರಣ ಖರೀದಿಸುವವರು ನಿಮ್ಮ ಮನೆಯ ಹತ್ತಿರದ ಫ್ಯಾನ್ಸಿ ಸ್ಟೋರ್‌ಗಳಲ್ಲಿ ಖರೀದಿಸಬಹುದು.

ಮನೆಯಲ್ಲಿಯೇ ಕುಳಿತು ಪೇಪರ್ ಕ್ವಿಲ್ಲಿಂಗ್ ಆಭರಣಗಳನ್ನು ತಯಾರಿಸಿಕೊಳ್ಳುವವರಿಗೆ ಕೆಲವೊಂದು ಟಿಪ್ಸ್..

## ಬೇಕಾಗುವ ವಸ್ತುಗಳು

ಕ್ವಿಲ್ಲಿಂಗ್ ಪೇಪರ್, ಅಂಟು, ದುಂಡನೆಯ ಸೂಜಿ ಹಾಗೂ ಬಳೆ ಅಂಗಡಿಗಳಲ್ಲಿ ದೊರಕುವ ಗೋಲ್ಡ್ ಅಥವಾ ಸಿಲ್ವರ್ ಕೋಟಿಂಗ್‌ಗಳುಳ್ಳ ಆಭರಣಗಳ ಹುಕ್‌ಗಳು ಮತ್ತು ಚೇನ್‌ಗಳು. ಮೊದಲಿಗೆ ಚಿತ್ರದಲ್ಲಿ ತೋರಿಸಿರುವಂತೆ ನಮಗಿಷ್ಟವಾದ ಕ್ವಿಲ್ಲಿಂಗ್ ಪೇಪರ್ ತೆಗೆದುಕೊಂಡು ಸೂಜಿಯಲ್ಲಿ ಸುತ್ತಿಕೊಂಡು ಅಂಚಿಗೆ ಗ್ಲೂನಿಂದ ಅಂಟಿಸಿ ಒಂದು ಬದಿಗೆ ಸ್ವಲ್ಪ ಪ್ರೆಸ್ ಮಾಡಿದರೆ ಅದು ಎಲೆಯ ವಿನ್ಯಾಸಕ್ಕೆ ಬರುತ್ತದೆ. ಇದೇ ರೀತಿ ಒಂದೇ ಬಣ್ಣದ ಪೇಪರ್‌ಗಳಿಂದ ಎಲೆಯ ವಿನ್ಯಾಸ ಮಾಡಿಕೊಂಡು ಮಧ್ಯಭಾಗದಲ್ಲಿ ದುಂಡನೆ ವಿನ್ಯಾಸವಿಟ್ಟು ಉಳಿದೆಲ್ಲವನ್ನೂ ಸುತ್ತಲೂ ಅಂಟಿಸಿದರೆ ಅದು ಹೂವಿನ ಆಕಾರಕ್ಕೆ ಬರುತ್ತದೆ. ನಿಮ್ಮ ಡ್ರೆಸ್‌ಗಳಿಗೆ ಮ್ಯಾಚ್ ಆಗುವ ರೀತಿಯಲ್ಲಿ ಬೇರೆ ಬೇರೆ ಬಣ್ಣದ ಹೂಗಳನ್ನು ತಯಾರಿಸಿ ಮೇಲೆ ಹುಕ್ ಅಳವಡಿಸಿ ಕಿವಿಯೋಲೆ, ನೆಕ್ಲೆಸ್, ಹೇರ್‌ಬ್ಯಾಂಡ್, ಬ್ರೇಸ್ಲೆಟ್, ಉಂಗುರಗಳನ್ನು ತಯಾರಿಸಿ ಧರಿಸಬಹುದು.